# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/92/14-15 ದಿನಾಂಕ :19/07/2016

ಉಪಸ್ಥಿತರು: ಶ್ರೀ ಲೋಕೇಶ್ ಪಿ. ಎನ್. ಕ.ಆ.ಸೇ

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಎ.ವೀರನಗೌಡ ತಂದೆ ಬೀಮರೆಡ್ಡಿ ಮನೆ ನಂ 27 ಬೀ.ಟಿ ನಗರ 1 ನೇ ಕ್ರಾಸ್ ಕಪ್ಪಗಲ್ ರೋಡ್ ಬಳ್ಳಾರಿ<br><br>(ಶ್ರೀ ಜೋಯಿಸ್ ಪ್ರಹ್ಲಾದ್ ವಕೀಲರು ಬಳ್ಳಾರಿ) | 1) ತಹಶೀಲ್ದಾರರು ಸಿರುಗುಪ್ಪ<br>2) ಕಂದಾಯ ನಿರೀಕ್ಷಕರು ತೆಕ್ಕಲಕೋಟೆ<br>3) ಹುಸೇನ್ ಸಾಬ್ ತಂದೆ ಖಾಜಾಹುಸೇನ್ 64 ಹಳೆಕೋಟೆ ಗ್ರಾಮ ಸಿರುಗುಪ್ಪ ತಾಲೂಕು<br>(R4-ಎಂ.ಸಿರಾಜುದ್ದೀನ್ ಮತ್ತು ಎ. ಸತಾ ಬಾಷಾ ವಕೀಲರು, ಬಳ್ಳಾರಿ) |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ |
|---|---|---|---|
| ಸಿರುಗುಪ್ಪ | ಹೆರಕಲ್ಲು | 34ಕೆ2 | 2.25 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ತೆಕ್ಕಲಕೋಟೆ ಇವರ ಎಂ ಆರ್ ನಂ 37/98-99 ದಿನಾಂಕ 10/05/99 ಹಾಗೂ ತಹಶೀಲ್ದಾರರು, ಸಿರುಗುಪ್ಪ ಇವರ ಹಿಂಬರಹ ಸಂಖ್ಯೆ 3/14-15 ದಿನಾಂಕ 25/04/2014 ರ ವಿರುದ್ದ ಮೇಲ್ಮನವಿಯನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿ ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿದ್ದಾರೆ. ವಿಳಂಬ ಮನ್ನಾ ಮಾಡಿ ಪ್ರಕರಣ ದಾಖಲಿಸಿ ಕೊಳ್ಳಲಾಯಿತು ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಪ್ರಕರಣವನ್ನು ದಾಖಲಿಸಿಕೊಂಡು ಉಭಯ ಪಕ್ಷಗಾರರಿಗೂ ನೋಟೀಸ್ ನ್ನು ನೀಡಿ ದಿನಾಂಕ 16/06/2015, 04/08/2015, 29/09/2015, 01/12/2015, 05/01/2016, 14/06/2016 ಹಾಗೂ 19/07/2015 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ವಾದಿಗಳು ಈ ನ್ಯಾಯಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿ, ಎಂ ನಂ 37/98-99 ಮತ್ತು ಹಿಂಬರಹ ಸಂಖ್ಯೆ ರೆಕಾರ್ಡ್/03/14-15 ದಿನಾಂಕ 25/04/2014 ರ ವಿರುದ್ಧ ಮೇಲ್ಮನವಿ ಸಲ್ಲಿಸಿ, ಸಿರುಗುಪ್ಪ ತಾಲ್ಲೂಕು ಹೆರಕಲ್ಲು ಗ್ರಾಮದ ಸ. ನಂ. 34ಕೆ ಪೈಕಿ ವಿಸ್ತೀರ್ಣ 2.44 ಎಕರೆ ಜಮೀನು ಕ್ರಯಪತ್ರ ಸಂಖ್ಯೆ 2203/1964 ದಿನಾಂಕ 14/08/1964 ರನ್ವಯ ಭೀಮರೆಡ್ಡಿ ಎಂಬುವವರು ಖರೀದಿಸಿದ್ದು, ತದನಂತರ ಸದರಿ ಜಮೀನು ಹಿಸ್ಸಾಗಳಾಗಿದ್ದು, 34ಕೆ2 ರಲ್ಲಿ ವಿಸ್ತೀರ್ಣ 2.25 ಎಕರೆ ಎಂದು ಇದ್ದು, ಪಹಣಿಯು ಮತ್ತು ನಕ್ಷೆ ಇರುತ್ತದೆ ಎಂದು 1995-96 ವರೆಗೆ ಭೀಮರೆಡ್ಡಿ ಇವರ ಹೆಸರಿಗಿದ್ದು, ಅವರ ಮರಣನಂತರ ಹೆಂಡತಿ ಹೆಚ್. ನಾಗಮ್ಮ ಇವರಿಗೆ ಎಂ ನಂ 23/95-96 ದಿನಾಂಕ 01/11/1995 ರಲ್ಲಿ ಹಕ್ಕು ಬದಲಾವಣೆಯಾಗಿರುವುದಾಗಿ ತಿಳಿಸಿರುತ್ತಾರೆ. ಪ್ರತಿವಾದಿ 3 ರವರಿಗೆ 34ಕೆ2 ರಲ್ಲಿ ಯಾವುದೇ ಹಕ್ಕು ಇರುವುದಿಲ್ಲವೆಂದು ಸದರಿ ನ್ಯೂನ್ಯತೆಯನ್ನು ಸರಿಪಡಿಸಲು ಕೋರಿಮ ತಹಶೀಲ್ದಾರರು ಇವರಿಗೆ ಅರ್ಜಿ ಸಲ್ಲಿಸಲಾಗಿ, ಯಾವುದೇ ಉತ್ತರ ಅಥವಾ ಕ್ರಮವಹಿಸಿರುವುದಿಲ್ಲವೆಂದು ನಿವೇದಿಸಿ ಕೊಳ್ಳುತ್ತಾ, ಪ್ರತಿವಾದಿ 3 ರವರು ವಿಸ್ತೀರ್ಣ 1.86 ಎಕರೆ ಜಮೀನನ್ನು ಖರೀದಿಸಿದ್ದು, ಸದರಿ ಜಮೀನನ್ನು ಡಾಕುಮೆಂಟ್ ಸಂಖ್ಯೆ 1506/1963 ರಲ್ಲಿ ಬಾಪುರದ ಹಿರೇಗೌಡರ ವೀರೇಶ ಗೌಡ ಇವರಿಂದ ಖರೀದಿಸಿರುತ್ತಾರೆಂದು ಋಣಭಾರ ಪ್ರಮಾಣ ಪತ್ರವನ್ನು ಹಾಜರುಪಡಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಲಭ್ಯ ದಾಖಲೆಗಳನ್ನು ಪರಿಶೀಲಸಲಾಗಿ ಪ್ರಶ್ನಿತ ಆಸ್ತಿಯ ಅಳತೆ ಕಾರ್ಯ ಮಾಡುವುದು ಅಗತ್ಯವಿದ್ದು, ಕಾರಣ ಪ್ರಕರಣವನ್ನು ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಉಪವಿಭಾಗಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಇವರಿಗೆ ಎರಡೂ ಪಕ್ಷದವರಿಗೆ ಮುಂಚಿತವಾಗಿ ನೋಟೀಸು ಜಾರಿಗೊಳಿಸಿ, ಅಳತೆ ಕಾರ್ಯ ಪೂರೈಸಿ ವರದಿಯನ್ನು ನೀಡಲು ಆದೇಶಿಸುವ ಈ ಕೆಳಕಂಡ ಮಧ್ಯಂತರ ಆದೇಶ.

:: <u>ಮಧ್ಯಂತರ ಆದೇಶ</u> ::

ಸಿರುಗುಪ್ಪ ತಾಲ್ಲೂಕು ಹೆರಕಲ್ಲು ಗ್ರಾಮದ ಸ. ನಂ. 34K ಜಮೀನಿಗೆ ಸಂಬಂಧಿಸಿದಂತೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಉಪವಿಭಾಗಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ ಇವರಿಗೆ ಎರಡೂ ಪಕ್ಷದವರಿಗೆ ಮುಂಚಿತವಾಗಿ ನೋಟೀಸು ಜಾರಿಗೊಳಿಸಿ, ಅಳತೆ ಕಾರ್ಯ ಪೂರೈಸಿ ವರದಿಯನ್ನು ಸಲ್ಲಿಸಲು ಆದೇಶಿಸಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.